# ಕಲೆಗಳಿಲ್ಲದೆ ಹೃದಯ ಶಸ್ತ್ರಚಿಕಿತ್ಸೆ

## ಹೃದಯವಂತನ ಸದ್ದಿಲ್ಲದ ಸಾಧನೆ

**ಕನಿಷ್ಠ ಗಾಯದ ಕಲೆ ಉಳಿಯುವ ಐನೂರಕ್ಕೂ ಹೆಚ್ಚು ಕೀಹೋಲ್ ಸರ್ಜರಿಗಳನ್ನು ಮಾಡಿರುವ ಡಾ. ರಾಜೇಶ್ ಕಿಶನ್ ರಾವ್, ಹೃದ್ರೋಗದಿಂದ ಬಳಲುತ್ತಿರುವ ಬಡ ರೋಗಿಗಳ ಪಾಲಿನ ಜಾದೂಗಾರ. ಎದೆಯ ಮೇಲೆ ಶಸ್ತ್ರಚಿಕಿತ್ಸೆಯ ಯಾವುದೇ ಗುರುತು ಇಲ್ಲದಂತೆ ಡಿಸ್ಚಾರ್ಜ್ ಆಗಿ ಮನೆಗೆ ಹೋಗುವ ಮಕ್ಕಳು–ಪೋಷಕರ ಮುಖದ ಮೇಲಿನ ಮಂದಹಾಸವೇ ಅವರ ಕೆಲಸಕ್ಕೆ ಪ್ರೇರಣೆಯಂತೆ.**

**■ ಡಾ. ನಾಗರಾಜು ಜಿ.ಬಿ., ಭೈರೇನಹಳ್ಳಿ**

‘ಸದ್ದುಗದ್ದಲವಿಲ್ಲದ ಸಾಧನೆ ಇಲ್ಲಿ ಗದ್ದುಗೆಯೇರಿದೆ’ ಎಂಬುದು ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರ ಕವನದ ಒಂದು ಸಾಲು. ದಿನವೂ ನೂರಾರು ಜೀವ ಉಳಿಸುವ ನಮ್ಮ ನಾಡಿನ ಹೆಮ್ಮೆಯ ಬೆಂಗಳೂರಿನ ಜಯದೇವ ಆಸ್ಪತ್ರೆಗೆ ಕೂಡ ಈ ಸಾಲನ್ನು ಸಮನ್ವಯಿಸಿ ಹೇಳಬಹುದು. ಖಾಸಗಿ ಆಸ್ಪತ್ರೆಗಳಲ್ಲಿ ಸಣ್ಣಪುಟ್ಟ ಸಾಧನೆಗಳೂ ದೊಡ್ಡ ಮೈಲಿಗಲ್ಲಿನಂತೆ ಕ್ಷಣಾರ್ಧದಲ್ಲಿ ಸುದ್ದಿಯಾಗಬಲ್ಲವು. ಆ ರೀತಿ ಸುದ್ದಿ ಮಾಡುವ ವ್ಯವಸ್ಥೆಗಳು ಅಲ್ಲಿ ಜಾರಿಯಲ್ಲಿರುತ್ತವೆ. ಜಯದೇವ ಆಸ್ಪತ್ರೆಯಲ್ಲಿ ನಿಜವಾಗಿಯೂ ದೊಡ್ಡ ಸಾಧನೆಗಳು ನಿತ್ಯ ಘಟಿಸಿದರೂ, ಮೈಲಿಗಲ್ಲುಗಳು ದಾಖಲೆಯಾದರೂ, ಅದು ಪ್ರಚಾರಕ್ಕೆ ಬಾರದೆ ಕಾಡ ಬೆಳದಿಂಗಳಿನಂತೆ ಸದ್ದಿಲ್ಲದೆ ಮರೆಯಾಗುತ್ತವೆ. ಅಂತಹ ಸಾಧಕರನ್ನು ಗುರುತಿಸಿ ಬೆಂಬಲಿಸಿ ಬೆನ್ನುತಟ್ಟಿದರೆ ಅವರಿಗೆ ಮತ್ತಷ್ಟು ಉತ್ತಮ ಸಾಧನೆಗಳನ್ನು ಮಾಡಲು ಸ್ಫೂರ್ತಿ ದೊರೆಯುತ್ತದೆ; ಅದರ ಲಾಭ ನಾಡಿನ ಬಡವರಿಗೆ ದೊರಕುತ್ತದೆ. ಏಕೆಂದರೆ, ಜಯದೇವ ಆಸ್ಪತ್ರೆಗೆ ಬರುವ ಬಹುಪಾಲು ರೋಗಿಗಳು ಬಡವರು ಹಾಗೂ ಮಧ್ಯಮ ವರ್ಗದವರು. ಇಲ್ಲಿನ ವೈದ್ಯರು ಮತ್ತು ನರ್ಸ್‌ಗಳು ದಾಖಲೆಗಳ ಬಗ್ಗೆ ತಲೆಕೆಡಿಸಿಕೊಳ್ಳದೆ, ತಮ್ಮ ಪಾಡಿಗೆ ತಮ್ಮ ಕೆಲಸವನ್ನು ಮಾಡಿಕೊಂಡು ಹೋಗುತ್ತಿರುತ್ತಾರೆ. ಇಲ್ಲಿ ಸಾಧನೆಗಳು ಅಧಿಕ, ಪ್ರಚಾರ ಕಡಿಮೆ. ಈಗ ಈ ರೀತಿಯ ಸದ್ದಿಲ್ಲದ ಸಾಧನೆ ಮಾಡಿರುವುದು ಜಯದೇವ ಆಸ್ಪತ್ರೆಯ ಕಾರ್ಡಿಯೊ ಥೊರಾಸಿಕ್ ಸರ್ಜನ್ ಪ್ರೊಫೆಸರ್ ಡಾ. ರಾಜೇಶ್ ಕಿಶನ್ ರಾವ್.

ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವವರಿಗೆ ‘ಕೀ ಹೋಲ್ ಸರ್ಜರಿ’ ಅಥವಾ **Modified RVIAT (Right Vertical Infra Axillary Thoracotomy)** ಎಂಬ ವಿನೂತನ ವಿಧಾನದಿಂದ ಸುಮಾರು 500ಕ್ಕೂ ಹೆಚ್ಚು ಮಂದಿಗೆ ಶಸ್ತ್ರಚಿಕಿತ್ಸೆ ಮಾಡಿ ಗುಣಪಡಿಸಿದ್ದಾರೆ. ಈ ಸಂಖ್ಯೆ ಕರ್ನಾಟಕದ ಸರ್ಕಾರಿ ಆಸ್ಪತ್ರೆಯ ಮಟ್ಟಿಗೆ ನಿಜಕ್ಕೂ ಒಂದು ದಾಖಲೆಯೇ ಸರಿ.



ಕೀ ಹೋಲ್ ಹೃದಯ ಚಿಕಿತ್ಸೆಗೆ ಒಳಗಾದ ಮಕ್ಕಳ ಎದೆಯ ಮೇಲೆ ಉಳಿಯುವ ಗಾಯದ ಕಲೆ

ಈ ಎಂಐಸಿಎಸ್ (**Minimally Invasive Cardiac Surgery**) ವಿಧಾನದಿಂದ ಡಾ. ರಾಜೇಶ್ ಶಸ್ತ್ರಚಿಕಿತ್ಸೆ ಮಾಡಿರುವ ಸುಮಾರು 504 ರೋಗಿಗಳಲ್ಲಿ ಅರ್ಧಕ್ಕಿಂತ ಹೆಚ್ಚಿನವರು (ಸುಮಾರು 275 ರೋಗಿಗಳು) 5ರಿಂದ 18 ವರ್ಷದ ಮಕ್ಕಳು. ಈ ವಿಧಾನದ ಮೂಲಕ ಆಪರೇಷನ್ ಮಾಡಿಸಿಕೊಂಡ ಶೇ.90ರಷ್ಟು ಮಂದಿ ಬಳಲುತ್ತಿದ್ದುದು **ASD (Atrial Septal Defect** – ಹೃದಯದ ಎರಡು ಹೃತ್ಕರ್ಣಗಳ ನಡುವೆ ಇರುವ ರಂಧ್ರ), **ASD with PAPVC** (ರಂಧ್ರದ ಜೊತೆಗೆ ಹೃದಯದ ರಕ್ತನಾಳಗಳ ಅದಲು ಬದಲು) ಎಂಬ ಹೃದಯ ರೋಗಗಳಿಂದ. ಇದಲ್ಲದೆ **MVR (Mitral Value Replacement** – ಹೃದಯದ ಕವಾಟಗಳನ್ನು ಬದಲಾಯಿಸುವ ಶಸ್ತ್ರಚಿಕಿತ್ಸೆ) ಹಾಗೂ **Right Atrial Myxoma** (ಬಲ ಹೃತ್ಕರ್ಣದಲ್ಲಿ ಬೆಳೆಯುವ ದುರ್ಮಾಂಸ) ಸರ್ಜರಿಯೂ ಸೇರಿವೆ.

ತೆರೆದ ಹೃದಯದ ಶಸ್ತ್ರಚಿಕಿತ್ಸೆಯಲ್ಲಿ ಸಾಮಾನ್ಯವಾಗಿ ನಮ್ಮ ಎದೆಯ